ಬೆಂಗಳೂರಿನಲ್ಲಿ ಮೇಲು ಸೇತುವೆಗಳ ನಿರ್ಮಾಣ.

2414(3402) ಶ್ರೀ ರಾಮಲಿಂಗರೆಡ್ಡಿ (ಜಯನಗರ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಹೊಸದಾಗಿ ಎಷ್ಟು ಮೇಲು ಸೇತುವೆಗಳನ್ನು ನಿರ್ಮಿಸಲಾಗುವುದು;

ಆ) ಎಲ್ಲೆಲ್ಲಿ ಈ ಮೇಲು ಸೇತುವೆಗಳನ್ನು ನಿರ್ಮಿಸಲಾಗುವುದು? ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಸಣ್ಣ ಸೇತುವೆಗಳನ್ನು ನಿರ್ಮಿಸಲಾಗುವುದು?

ಈ) ಈ ಸಾಲಿನಲ್ಲಿ ಯಾವ ಯಾವ ಮೇಲು ಸೇತುವೆ ಕಾಮಗಾರಿಗಳು ಪ್ರಾರಂಭವಾಗುತ್ತಿವೆ.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಸುಮಾರು 22 ಸಂಚಾರಿ ಕೂಡು ಸ್ಥಳಗಳನ್ನು ಗುರ್ತಿಸಲಾಗಿದೆ. ಈ ಬಗ್ಗೆ ಕಾರ್ಯಸಾಧ್ಯತೆ ಅಧ್ಯಯನಗಳನ್ನು ತೆಗೆದುಕೊಳ್ಳಲಾಗಿದೆ. ಸರಿಯಾದ ಸಂಖ್ಯೆಯನ್ನು ಅಧ್ಯಯನ ವರದಿ ಬಂದ ನಂತರ ಅಂತಿಮ ಗೊಳಿಸಲಾಗುವುದು.

ಆ) ಕಾರ್ಯಸಾಧ್ಯತೆ ವರದಿ ಬಂದ ನಂತರ ಪ್ರತಿ ಜಾಗದ ವಿನ್ಯಾಸ ತಯಾರಿಸಿದ ನಂತರ ನಿಖರವಾದ ಜಾಗಗಳು ಮತ್ತು ಅವುಗಳಿಗೆ ತಗಲಬಹುದಾದ ವೆಚ್ಚದ ವಿವರಗಳು ಲಭ್ಯವಾಗುತ್ತವೆ.

ಇ) -ಅದೇ-

ಈ) ಕಾಮಗಾರಿಗಳ ಆದ್ಯತೆಯನ್ನು ಕಾರ್ಯ ಸಾಧ್ಯತೆ ವರದಿಗಳು ಪೂರ್ಣಗೊಂಡ ನಂತರ ಮತ್ತು ಹಣಕಾಸು ಸಂಸ್ಥೆಗಳ ಮುಂದೆ ಮಂಡಿಸಿ ನಂತರ ತೀರ್ಮಾನಿಸಲಾಗುವುದು.

ಮೈಸೂರಿನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಮಂಡಳಿಯ ಯೋಜನೆಗಳು.

2417(3409) ಶ್ರೀ ರಾಮದಾಸ್ ಎ. (ಕೃಷ್ಣರಾಜ) :— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.